- 10 -

ಅ. ದಾ. ಸಂ. ಃ **34/2022**

ಪಿ.ಡಬ್ಲ್ಯೂ ಃ **01**

ದಿನಾಂಕ ಃ **07-08-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲು ಃ- ವಾದಿಯ ಪರ ಶ್ರೀ. ಜಿ ವಿ . ವಕೀಲರಿಂದ ಜಿ ಹೆಚ್ ಎಂ ವಕೀಲರ ಪರವಾಗಿ ಃ-**

ನೀವು ವಾಸ ಇರುವುದು ಎಲ್ಲಿ ಎಂದರೆ ಸಾಕ್ಷಿ ಗೋವಿಂದರಾಜನಗರ, ಬೆಂಗಳೂರು ಎಂದು ನುಡಿಯುತ್ತಾರೆ. ಸದರಿ ವಿಳಾಸದಲ್ಲಿ ಎಷ್ಟು ವರ್ಷಗಳಿಂದ ವಾಸ ಇದ್ದೀರಿ ಎಂದರೆ ಸಾಕ್ಷಿ 2011 ರಿಂದ ಎಂದು ನುಡಿಯುತ್ತಾರೆ. ನೀವು ಏನು ಕೆಲಸ ಮಾಡುತ್ತಿದ್ದೀರಿ ಎಂದರೆ ಸಾಕ್ಷಿ ಈಗ ಏನು ಕೆಲಸ ಮಾಡುತ್ತಿರುವುದಿಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯು 4 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ , ಬೆಂಗಳೂರಿನಲ್ಲಿ ಅಸಲು ದಾವೆ ನಂ. 1532/2021 ರಂತೆ ದಾವೆಯನ್ನು ಸಲ್ಲಿಸಿದ್ದು ಆ ಬಗ್ಗೆ ನಿಮಗೆ ಗೊತ್ತಿದೆಯೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಪ್ರತಿವಾದಿಗಳು ಸಲ್ಲಿಸಿರುವ ಪ್ರತಿವಾದ ಪತ್ರವನ್ನು ಓದಿ ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿ ಹೌದು ಓದಿ ತಿಳಿದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ತಮ್ಮಪ್ರತಿವಾದಪತ್ರದ ಪ್ಯಾರ 2 ರಲ್ಲಿ ಸದರಿ ಅಸಲು ದಾವೆ ನಂ .1532/2021 ಅನ್ನು ಸಲ್ಲಿಸಿದ್ದ ಬಗ್ಗೆ ಹೇಳಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ಪ್ರಸ್ತುತ ದಾವೆಯ ದಾವಾಸ್ವತ್ತನ್ನು ಸೇರಿಸಿ ವಿಭಾಗಕ್ಕೆ ದಾವೆಯನ್ನು ಸಲ್ಲಿಸಿದ್ದು ಸದರಿ ದಾವೆಯಲ್ಲಿ ದಾವಾಸ್ವತ್ತುಗಳನ್ನು ಮಾರಾಟ ಮಾಡದಂತೆ ತಾತ್ಕಾಲಿಕ ನಿರ್ಭಂದಕಾಜ್ಞೆ ಆದೇಶವಾಗಿದ್ದು ಆ ಬಗ್ಗೆ ತಿಳಿದುಕೊಂಡಿರುತ್ತೀರಾ ಎಂದರೆ

ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ಪ್ರತಿವಾದ ಪತ್ರ ಸಲ್ಲಿಸಿದ ನಂತರ ನೀವೇನಾದರೂ ಸದರಿ ಅಸಲು ದಾವೆ ನಂ.1532/2021 ರಲ್ಲಿ ನಿಮ್ಮನ್ನು ಸೇರಿಸಲು ಅರ್ಜಿ ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ನೀವು implead ಅರ್ಜಿ ಸಲ್ಲಿಸಲು ನಿಮಗೆ ತೊಂದರೆ ಇರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸಾಕ್ಷಿ ಸದರಿ ಅಸಲು ದಾವೆ ನಂ .1532/2021 1 ನೇ ಪ್ರತಿವಾದಿಯ ಪರವಾಗಿ ತೀರ್ಪಾದರೆ ನೀವು ದಾವಾಸ್ವತ್ತನ್ನು ಬಿಟ್ಟು ಕೊಡಲು ನಿಮಗೆ ಏನು ತೊಂದರೆ ಇರುವುದಿಲ್ಲವಾ ಎಂದರೆ ಸಾಕ್ಷಿ ನನ್ನ ಹಣ ವಾಪಸ್ಸು ಕೊಟ್ಟರೆ ತೊಂದರೆ ಇರುವುದಿಲ್ಲ ಎಂದು ನುಡಿಯುತ್ತಾರೆ.

ನೀವು ಹಣವನ್ನು ಯಾರಿಗೆ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ರಕ್ಷಿತ್ ರವರಿಗೆ ಎಂದು ನುಡಿಯುತ್ತಾರೆ. ದಾವಾಸ್ವತ್ತನ್ನು ಕರೀದಿ ಮಾಡುವ ಸಮಯದಲ್ಲಿ ಪೇಪರ್ ನೋಟಿಸ್ ಏನಾದರೂ ಕೊಟ್ಟಿದ್ದಿರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ನೋಟೀಸ್ ಕೊಡಲು ತೊಂದರೆ ಇದ್ದಿರಲಿಲ್ಲವಾ ಎಂದರೆ ಸಾಕ್ಷಿ ಏನೂ ತೊಂದರೆ ಇದ್ದಿರಲಿಲ್ಲ ಎಂದು ನುಡಿಯುತ್ತಾರೆ. ದಾವಾಸ್ವತ್ತನ್ನು ಕರೀದಿ ಮಾಡುವ 1 ಅಥವಾ 2 ತಿಂಗಳು ಮೊದಲು ದಾವಾಸ್ವತ್ತಿಗೆ ಬೇಟಿ ನೀಡಿದ್ದಿರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ದಾವಾಸ್ವತ್ತು ಎಲ್ಲಿ ಇದೆಯೋ ಅದೇ ಊರಿನವರಾ ನೀವು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅದಕ್ಕೆ ಸಂಬಂಧಪಟ್ಟಂತೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಯಲಗದಹಳ್ಳಿಯಲ್ಲಿ ನಿಮ್ಮ ಜಮೀನುಗಳು ಇರುತ್ತವೆಯೆ ಎಂದರೆ ಸಾಕ್ಷಿ ಹೌದು ನಮ್ಮ ಪಿತ್ರಾರ್ಜಿತ ಆಸ್ತಿಗಳು ಹಾಗೂ ನನ್ನ ಸ್ವಂತ ಆಸ್ತಿ ಇರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ನನ್ನ

ಊರು ಚಕ್ರಭಾವಿ ಎಂದು ನುಡಿಯುತ್ತಾರೆ. ನಿಮ್ಮ ಊರು ಚಕ್ರಭಾವಿ ಎಂದು ವಾದಪತ್ರದಲ್ಲಿ ಹಾಗೂ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಹೇಳಿರುತ್ತೀರಾ ಎಂದರೆ ಸಾಕ್ಷಿ ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ. ಯಲಗದಹಳ್ಳಿಯಲ್ಲಿ ನಿಮಗೆ ಸೇರಿದ ಚುನಾವಣಾ ಗುರುತಿನ ಚೀಟಿ ಮತ್ತು ಆಧಾರ್ ಕರ್ಡ್ ಹಾಜರು ಪಡಿಸಿರುತ್ತೀರಾ ಎಂದರೆ ಸಾಕ್ಷಿ ಯಲಗದಹಳ್ಳಿ ಎಂದು ಊರು ಇರುವುದಿಲ್ಲ ಆದರೆ ಕಂದಾಯ ದಾಖಲೆಗಳಲ್ಲಿ ಮಾತ್ರ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಯಲಗದಹಳ್ಳಿಯಲ್ಲಿ ನಿಮ್ಮ ಜಮೀನು ಇದೆಯೆ ಎಂದರೆ ಸಾಕ್ಷಿ ಇರುತ್ತದೆ ಎಂದು ನುಡಿಯುತ್ತಾರೆ. ಆ ಸಂಬಂಧ ದಾಖಲೆ ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿ ಹಾಜರು ಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ.

ಈಗ ಸಾಕ್ಷಿಗೆ ಜೆರಾಕ್ಸ್ ?ಪ್ರತಿಯ ಅಸಲು ದಾವೆ ನಂ .1532/2021 ರ ಆದೇಶದ ಪ್ರತಿಗಳನ್ನು ತೋರಿಸಿ ದಿನಾಂಕ 18.09.2021 ರ ಆದೇಶವಾದ ನಂತರ ನೀವು ಕ್ರಯಪತ್ರವನ್ನು ಮಾಡಿಕೊಂಡಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀವು ದಾವಾಸ್ವತ್ತನ್ನು ಕ್ರಯಕ್ಕೆ ಪಡೆಯುವ ಮೊದಲು ದಾವಾಸ್ವತ್ತಿನ ಅಕ್ಕಪಕ್ಕದವರನ್ನು ಸದರಿ ಸ್ವತ್ತಿಗೆಸಂಬಂಧಪಟ್ಟಂತೆ ನ್ಯಾಯಾಲಯದಲ್ಲಿ ಕೇಸು ಇರುತ್ತದೆಯೆ ಎಂದು ವಿಚಾರ ಮಾಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ವಿಚಾರಣೆ ಮಾಡಲು ನಿಮಗೆ ತೊಂದರೆ ಇದ್ದಿರಲಿಲ್ಲವಾ ಎಂದರೆ ಸಾಕ್ಷಿ ತೊಂದರೆ ಇದ್ದಿರಲಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ. ದಾವಾಸ್ವತ್ತಿನಲ್ಲಿ ಒಂದು ಶೆಡ್ ಇರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಶೆಡ್ ಮೇಲೆ 1 ನೇ ಪ್ರತಿವಾದಿ ಅಸಲು ದಾವೆ ನಂ 1532/2021 ರ ಆದೇಶದ ಬಗ್ಗೆ ಬರೆದಿದ್ದರು ಎಂದರೆ ಸಾಕ್ಷಿಯು

ಇಲ್ಲ ಎಂದು ನುಡಿಯುತ್ತಾರೆ. ನೀವು ಬರೆದಿದ್ದಿರಲಿಲ್ಲ ಎಂದು ಹೇಳಿದ್ದು ಹೋಗಿ ನೋಡಿದ್ದೀರಾ ಎಂದರೆ ಸಾಕ್ಷಿ ಹೋಗಿದ್ದಿರಲಿಲ್ಲ ಎಂದು ನುಡಿಯುತ್ತಾರೆ.

**ನ್ಯಾಯಾಲಯದ ಪ್ರಶ್ನೆಃಃ** 1 ನೇ ಪ್ರತಿವಾದಿಯು ಸದರಿ ಶೆಡ್ ಮೇಲೆ ಬರೆದಿದ್ದಿರಲಿಲ್ಲ ಎಂದು ಹೇಳಿದ್ದು ಯಾವ ಆಧಾರದ ಮೇಲೆ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಯು ನಾನು ಪ್ರಸ್ತುತ ದಾವೆಯ ಬಗ್ಗೆ ಶೆಡ್ ?ನಲ್ಲಿ ನಮೂದು ಮಾಡಲು ಹೋದಾಗ ಸದರಿ ಅಸಲು ದಾವೆ ನಂ .1532/2021 ರ ಬಗ್ಗೆ ಯಾವುದೇ ನಮೂದು ಇದ್ದಿರಲಿಲ್ಲ ಎಂದು ನುಡಿಯುತ್ತಾರೆ.

ಈಗ ಸಾಕ್ಷಿಗೆ ಪೋಟೋ ತೋರಿಸಲಾಗಿ ಸದರಿ ಪೋಟೋದಲ್ಲಿ ಇರುವ ಶೆಡ್ ಇದೆನಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆ ಕಾರಣ ಸದರಿ ಪೋಟೋವನ್ನು **ನಿಡಿ-1 ಎಂದು** ಗುರುತಿಸಲಾಯಿತು. ಈಗ ಸಾಕ್ಷಿಗೆ ಪೋಟೋ ತೋರಿಸಲಾಗಿ ಸದರಿ ಪೋಟೋದಲ್ಲಿ ಇರುವ ವ್ಯಕ್ತಿ ಹಾಗೂ ಈಗ ನ್ಯಾಯಾಲಯದಲ್ಲಿ ಇರುವ ವ್ಯಕ್ತಿ ಇಬ್ಬರೇ ಅಲ್ಲವಾ ಎಂದರೆ ಸಾಕ್ಷಿ ಹೌದು ಒಬ್ಬರೆ ಎಂದು ನುಡಿಯುತ್ತಾರೆ. ಸದರಿ ಪೋಟೋವನ್ನು **ನಿಡಿ-2 ಎಂದು** ಗುರುತಿಸಲಾಯಿತು. ಈಗ ಸಾಕ್ಷಿಗೆ ಪೋಟೋ ತೋರಿಸಲಾಗಿ ಸದರಿ ಪೋಟೋದಲ್ಲಿರುವ ಮಾವಿನ ಮರ ಹಾಗು ಶೆಡ್ ಇರುವ ಸ್ವತ್ತು ದಾವಾಸ್ವತ್ತು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಈಗ ಸಾಕ್ಷಿಗೆ ಇನ್ನೊಂದು ಪೋಟೊ ತೋರಿಸಲಾಗಿ ಸದರಿ ಪೋಟೋದಲ್ಲಿರುವ ಮಾವಿನ ಮರ ದಾವಾಸ್ವತ್ತಿನಲ್ಲಿ ಇರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆ ಕಾರಣ ಸದರಿ ಪೋಟೋಗಳನ್ನು **ನಿಡಿ-3 ಮತ್ತು ನಿಡಿ-4** ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಪೋಟೋಗಳನ್ನು ತೋರಿಸಲಾಗಿ ಸದರಿ ಪೋಟೋದಲ್ಲಿರುವ ಸ್ವತ್ತು ನಿಮ್ಮ ದಾವಾಸ್ವತ್ತು ಎಂದರೆ ಸಾಕ್ಷಿ ಹೌದು ಎಂದು

ನುಡಿಯುತ್ತಾರೆ. ಆ ಕಾರಣ ಸದರಿ ಪೋಟೋಗಳನ್ನು **ನಿಡಿ-5, ನಿಡಿ-6, ನಿಡಿ-7, ನಿಡಿ-8, ನಿಡಿ-9 , ನಿಡಿ-10 ಮತ್ತು ನಿಡಿ-11** ಎಂದು ಗುರುತಿಸಲಾಯಿತು. ನಿಡಿ-11 ರಂತೆ 1 ನೇ ಪ್ರತಿವಾದಿಯು ಮಾವಿನ ಮರಗಳಿಗೆ ಔಷಧಿ ಸಿಂಪಡಿಸುತ್ತಿದ್ದಾರೆ ಎಂದರೆ ಸಾಕ್ಷಿ ಹೌದು ನನ್ನ ಗೈರು ಹಾಜರಾತಿಯಲ್ಲಿ ಕಬ್ಜ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ನನ್ನ ಗೈರು ಹಾಜರಾತಿಯಲ್ಲಿ ಔಷಧಿ ಸಿಂಪಡಿಸುತ್ತಿದ್ದಾರೆ ಎಂದು ನುಡಿಯುತ್ತಾರೆ. ಅದೇ ರೀತಿ ನಿಡಿ-7 ರಂತೆ 1 ನೇ ಪ್ರತಿವಾದಿಯು ಹೊಲ ಉಳುಮೆ ಮಾಡಿಸುತ್ತಿದ್ದಾರೆ ಎಂದರೆ ಸಾಕ್ಷಿ ನನ್ನ ಗೈರು ಹಾಜರಿಯಲ್ಲಿ ಹೋಗಿ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಸದರಿ ವ್ಯವಸಾಯ ಮಾಡುವ ಸಮಯದಲ್ಲಿ ನೀವು ದಾವಾಸ್ವತ್ತಿನಲ್ಲಿ ಸ್ವಾಧಿನ ಇದ್ದಿರಲಿಲ್ಲ ಎಂದರೆ ಸಾಕ್ಷಿ ಆ ದಿನ ಇದ್ದಿರಲಿಲ್ಲ ಅದರೆ ನಾನು ಹೋಗಿ ಬರುವುದನ್ನು ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದರಿಂದ, ಸಮಯ ನೀಡಿ ಮುಂದುವರೆದ ಪಾಟೀಸವಾಲನ್ನು ಮುಂದೂಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ಸಿ. ಜ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**